**ಸಾಕ್ಷಿಯನ್ನು ದಿಃ 24.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಎ.ಎಂ.ಆರ್., ವಕೀಲರಿಂದಃ**

ನಿಪಿ.15 ರಲ್ಲಿ ಕಂಡು ಬರುವ ಮಾರಾಟಗಾರರಾದ ಶ್ರೀ.ವೆಂಕಟಮುನಿಯಪ್ಪ ರವರು ನಿಪಿ.15 ರಲ್ಲಿ ಕಂಡು ಬರುವ ಸ್ವತ್ತುನ್ನು ಯಾರಿಂದ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸದರಿ ವೆಂಕಟಮುನಿಯಪ್ಪ 1975 ರಲ್ಲಿ ಖರೀದಿ ಮಾಡಿದಾಗ ಆತನಿಗೆ ಮಾರಾಟ ಮಾಡಿದ ಮಾರಾಟಗಾರರು ಯಾವ ದಾಖಲೆಗಳನ್ನು ಕೊಟ್ಟಿದ್ದರೆಂದು ನನಗೆ ಗೊತ್ತಿಲ್ಲ. ಸದರಿ ವೆಂಕಟಮುನಿಯಪ್ಪ ನಿಪಿ.15 ನ್ನು ನನ್ನ ಅಣ್ಣ ಸೋಮಪ್ಪನಿಗೆ ಮಾಡುವಾಗ ಸದರಿ ನಿಪಿ.15 ನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಗಳನ್ನು ಕೊಟ್ಟಿಲ್ಲ. ನಿಪಿ.15 ಕ್ಕೂ ಮತ್ತು ನಿಪಿ.14 ಕ್ಕೂ ಕಂಡು ಬರುವಂತೆ ಅದರಲ್ಲಿರುವ ಸ್ವತ್ತುಗಳಿಗೆ ಮತ್ತು ಚೆಕ್ಕುಬಂದಿಗೆ ವ್ಯತ್ಯಾಸವಿದೆ ಎಂದರೆ ಸರಿ. 29 ಇಂಟು 58 ವರೆ ಅಡಿ ಜಾಗವನ್ನು ಸರ್ಕಾರವೂ ನನಗೆ ಮಂಜೂರು ಮಾಡಿಲ್ಲ. ನನ್ನ ಸೋಮಪ್ಪ ಖರೀದಿ ಮಾಡಿದಾಗ ಮತ್ತು ಆತನ ಕ್ರಯದಾರನಾದ ವೆಂಕಟಮುನಿಯಪ್ಪ ಮಾರಾಟ ಮಾಡಿದ ಆಸ್ತಿಗೆ ಹೊಂದಿಕೊಂಡಂತೆ ಪಶ್ಚಿಮದ ಕಡೆ ಬಂಡಿದಾರಿಯಿದೆ ಎಂದರೆ ಸಾಕ್ಷಿಯು ರಸ್ತೆ ಇದೆ ಎಂದು ನುಡಿಯುತ್ತಾರೆ. ವೆಂಕಟಮುನಿಯಪ್ಪ ತಾನು ಖರೀದಿ ಮಾಡಿದ ವಿಸ್ತೀರ್ಣದ ಆಸ್ತಿಯನ್ನೇ ನನ್ನ ಅಣ್ಣ ಸೋಮಪ್ಪನಿಗೆ ಮಾರಾಟ ಮಾಡಿದರು ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮಕ್ಕೆ ಪ್ರತಿವಾದಿಯರು ಪೂರ್ವ–ಪಶ್ಚಿಮ 18 ಅಡಿ, ಉತ್ತರ–ದಕ್ಷಿಣ 58 ಅಡಿಯ ಜಾಗದಲ್ಲಿ ತಿಪ್ಪೆ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ತದನಂತರ ಸದರಿ ಪ್ರತಿವಾದಿಗಳ ಸ್ವತ್ತಿನ ಪಶ್ಚಿಮಕ್ಕೆ ನಿಪಿ.9 ರಿಂದ 12 ರಲ್ಲಿ ಕಂಡು ಬರುವ ಸಿಮೆಂಟ್ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ.

ನಿಪಿ.16 ರಲ್ಲಿ ಕಂಡು ಬರುವ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯ ಸಂಖ್ಯೆ.22/2:199 ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿ ಮಾಡಲಾಗಿದೆಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಹೆಚ್ವುವರಿಯಾಗಿ ಸೇರಿಸಲಾದ ಜಾಗವನ್ನು ಖಾತೆ ಮಾಡುವ ಸಮಯದಲ್ಲಿ ಸರ್ಕಾರದಿಂದ ಅನುಮತಿಯನ್ನು ಪಡೆದುಕೊಂಡು ಖಾತೆ ಮಾಡಿರುತ್ತಾರೆ. ಇ-ಖಾತೆ ಮಾಡುವಾಗ ಹೆಚ್ಚುವರಿಯಾಗಿ ವಿಸ್ತೀರ್ಣವನ್ನು ನಮೂದು ಮಾಡಿ ಖಾತೆ ಮಾಡಿರುವ ಬಗ್ಗೆ ನಡವಳಿಗಳನ್ನು ಹಾಜರು ಮಾಡಿಲ್ಲ. ನನ್ನ ನಿವೇಶನಕ್ಕೆ ಹೋಗಲು ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆಂದು ಈ ಮುಂಚೆ ಹೇಳಿದಂತೆ ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ನಾನು ನನ್ನ ಅಣ್ಣನಿಂದ ಖರೀದಿ ಮಾಡಿದಾಗ ಸೃಷ್ಟಿಸಿ ಹೆಚ್ಚುವರಿಯಾಗಿ ವಿಸ್ತೀರ್ಣವನ್ನು ತೋರಿಸಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಖರೀದಿ ಮಾಡಿದ ಆಸ್ತಿಗೂ ಮತ್ತು ಪಶ್ಚಿಮದ ಕಡೆ ಬರುವ ಸಿಮೆಂಟ್ ರಸ್ತೆಯ ಮಧ್ಯದಲ್ಲಿ ಪ್ರತಿವಾದಿಗಳ ಆಸ್ತಿ ಇದ್ದು ಅದನ್ನೇ ಹೆಚ್ಚುವರಿಯಾಗಿ ತೋರಿಸಿ ನಾನು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೆಚ್ಚುವರಿಯಾಗಿ ಮಾಡಿಸಿಕೊಂಡಿರುವ ವಿಸ್ತೀರ್ಣವೂ ಪೂರ್ವದ ಕಡೆ ಬರುತ್ತದೆಂದು ನುಡಿಯುತ್ತಾರೆ. ನನ್ನ ಅಣ್ಣ ಖರೀದಿ ಮಾಡಿದ ಕಾಲಕ್ಕೆ ಸದರಿ ಖರೀದಿ ಮಾಡಿದ ಸ್ವತ್ತಿನ ಪೂರ್ವಕ್ಕೆ ಪಾಪಸ್‌ಕಳ್ಳಿ ಗಿಡಗಳು ಇತ್ತು. ನನ್ನ ಅಣ್ಣ ಸದರಿ ಸ್ವತ್ತನ್ನು ಪಶ್ಚಿಮದ ಕಡೆಯಿಂದ ಅಳತೆ ಮಾಡಿ ಕೊಂಡುಕೊಂಡಿರುತ್ತಾರೆ. ಸದರಿ ಜಾಗವೂ 29 ಅಡಿಯಷ್ಟು ವಿಸ್ತೀರ್ಣ ಇದ್ದು ಪಾಪಸ್‌ಕಳ್ಳಿ ಗಿಡಗಳು ಇತ್ತು. ಸದರಿ ಪಾಪಸ್‌ಕಳ್ಳಿ ಅಸ್ಥಿತ್ವ ಇದ್ದ ಬಗ್ಗೆ ಯಾವುದೇ ಪತ್ರ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನಿಪಿ.15 ರಲ್ಲಿ ಖರೀದಿ ಮಾಡಿದ ಸ್ವತ್ತಿನ ವಿಸ್ತೀರ್ಣವನ್ನು ಹೊರತುಪಡಿಸಿ

ಹೆಚ್ಚುವರಿಯಾಗಿ ನಾನು ಮತ್ತು ನನ್ನ ಅಣ್ಣ ಸೇರಿಕೊಂಡು ಪ್ರತಿವಾದಿಗಳ ಸ್ವತ್ತುನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ.14 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನಗಾಗಲೀ ಮತ್ತು ನನ್ನ ಅಣ್ಣನಾಗಲೀ ಅಥವಾ ವೆಂಕಟಮುನಿಯಪ್ಪನಾಗಲೀ ದಾವಾ ಸ್ವತ್ತಿನಲ್ಲಿ ಕಾಣಿಸಿದ ಸಂಪೂರ್ಣ ವಿಸ್ತೀರ್ಣದಲ್ಲಿ ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**